ಮಾಡಬೇಕಾಗುತ್ತಿದೆ. ಬಡವರಲ್ಲಿ ಬಡವರನ್ನು ಆದ್ಯತೆ ಮೇರೆಗೆ ಗುರ್ತಿಸಿ, ಪ್ರತಿವರ್ಷ ನೂತನ ಗುರಿಯಡಿ ಫಲಾನುಭವಿಗಳ ಆಯ್ಕೆ ನಡೆಯುತ್ತಿದೆ. ಅವರಿಗೆ ನಿವೇಶನ: ಮನೆಗಳನ್ನು ಸರ್ಕಾರ ನಿಗದಿಪಡಿಸಿದ ಗುರಿಯ ಮಿತಿಯಲ್ಲಿ ನೀಡಲಾಗುತ್ತಿದೆ. ಫಲಾನುಭವಿಗಳ ಆಯ್ಕೆ ಗ್ರಾಮಸಭೆಯ ವ್ಯಾಪ್ತಿಗೆ ಒಳಪಡುತ್ತದೆ.. ವಾರ್ಷಿಕ ವರಮಾನ 11,800 ರೂ.ಗಳಿಗಿಂತ ಕಡಿಮೆ ಇರುವ ನೈಜವಾದ ಅರ್ಧ ಫಲಾನುಭವಿಯನ್ನು ಬಡವರಲ್ಲಿ ಬಡವನಿಗೆ ಎಂಬ ತತ್ವದ ಆಧಾರದ ಮೇಲೆ ಗುರ್ತಿಸಿ ಆಯ್ಕೆ ಮಾಡಲಾಗುತ್ತಿದೆ. ಗ್ರಾಮ ಪಂಚಾಯಿತಿ:ತಾಲ್ಲೂಕ್ ಪಂಚಾಯಿತಿ ಜಿಲ್ಲಾ ಪಂಚಾಯಿತಿಗಳಿಗೆ ಮೇಲ್ಕಂಡ ಆಯ್ಕೆಯಲ್ಲಿ ಅನರ್ಹರಿದ್ದರೆ, ಅವರನ್ನು ತೆಗೆದು ಹಾಕಲು ಅಧಿಕಾರವಿದೆ. ಅನರ್ಹ ಫಲಾನುಭವಿಗಳ ಆಯ್ಕೆ ಮಂಜೂರಾತಿ ಸರ್ಕಾರದ ಗಮನಕ್ಕೆ ಬಂದಾಗ ರದ್ದುಗೊಳಿಸಿದೆ.

ವಿಷಯ:- ದ.ಕ. ಜಿಲ್ಲೆಯಲ್ಲಿ ರಬ್ಬರ್ ಬೆಳೆಸಿದ ಅಕ್ರಮಿಕ ಜಾಗಗಳನ್ನು ಸಕ್ರಮಗೊಳಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 260 (525)

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಜನ ಕಾನ ಬಾಣಿ ಹಾಗೂ ಕುಮ್ಕಿ ಪ್ರದೇಶಗಳಲ್ಲಿ ಅನಧಿಕೃತ ಸಾಗುವಳಿ ಮಾಡಿದ್ದು ಸಕ್ರಮೀಕರಣಕ್ಕೆ ಅರ್ಜಿ ಸಲ್ಲಿಸಿರುವುದು ನಿಜವೇ?

ಆ) ಈ ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಭೂ ಕಂದಾಯ ಅಧಿನಿಯಮಕ್ಕೆ ತಿದ್ದುಪಡಿ ತರುವ ವಿಚಾರ ಸರ್ಕಾರದ ಗಮನದಲ್ಲಿ ಇದೆಯೇ?

ಇ) ರಬ್ಬರ್ ಬೆಳೆಸಿದ ಅಕ್ರಮಿಕ ಜಾಗಗಳಿಗೆ ಸಕ್ರಮೀಕರಿಸುವ ಇರಾದೆ ಸರ್ಕಾರಕ್ಕಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) ಹೌದು.

ಆ ಮತ್ತು ಇ) ಸದರಿ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತವೆ.

ವಿಷಯ:- ತುಮಕೂರು ನಗರಕ್ಕೆ ಸಾರಿಗೆ ವ್ಯವಸ್ಥೆ ಉತ್ತಮಗೊಳಿಸಲು ಕೈಗೊಂಡ ಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 261 (635)

ಶ್ರೀ ಜಿ.ಎಸ್.ಶಿವರುದ್ರಪ್ಪ (ಗುಬ್ಬಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ